589(729) : ಶ್ರೀ ಮಲ್ಲಿಕಾರ್ಜುನ್ ಸಿದ್ಧರಾಮಪ್ಪ ಖೂಬ (ಬಸವಕಲ್ಯಾಣ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸಕಲ್ಯಾಣ ಮತಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳು ಯಾವುವು ಹಾಗೂ ಇವು ಎಷ್ಟು ಕಿಮೀ ಉದ್ದದ ರಸ್ತೆಗಳಾಗಿವೆ;

ಆ) ಈ ರಸ್ತೆಗಳ ಪೈಕಿ ಅಂತರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು ಯಾವುವು;

ಇ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ದುರಸ್ಥಿಗಾಗಿ ಇಲಾಖೆಯು ಕಳೆದ 3 ವರ್ಷಗಳಿಂದ ಪ್ರತಿ ವರ್ಷ ವೆಚ್ಚ ಮಾಡಿದ ಹಣವೆಷ್ಟು;

ಈ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ವಿಶೇಷವಾಗಿ ನೆರೆಯ ಮಹಾರಾಷ್ಟ್ರಕ್ಕೆ ಸಂಪರ್ಕವನ್ನು ಕಲ್ಪಿಸುವ ರಸ್ತೆಗಳು ಅತ್ಯಂತ ದುಸ್ಥಿತಿಯಲ್ಲಿದ್ದು ಇವುಗಳ ದುರಸ್ಥಿಗಾಗಿ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ;

ಉ) ಪ್ರಸಕ್ತ ಸಾಲಿನಲ್ಲಿ ಈ ಕಾರ್ಯಕ್ಕಾಗಿ ವೆಚ್ಚ ಮಾಡುವ ಹಣವೆಷ್ಟು;

ಊ) ಈ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಹಾಗೂ ಇದ್ದಲ್ಲಿ ಯಾವ ಯಾವ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಸವಕಲ್ಯಾಣ ಮತ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಉದ್ದದ ವಿವರಗಳು ಈ ಕೆಳಗಿನಂತಿವೆ.

ರಸ್ತೆಯ ಹೆಸರು	ರಸ್ತೆಯ ಉದ್ದ (ಕಿಮೀಗಳಲ್ಲಿ)
ರಾಜ್ಯ ಹೆದ್ದಾರಿಗಳು:	
1. ರಾಜ್ಯದ ಗಡಿಯಿಂದ ಹಲಸೂರು, ಬಸವಕಲ್ಯಾಣ, ಮೂಡಬಿ ಮಹಾಗಾಂವ್‌ರಸ್ತೆ (ರಾಜ್ಯ ಹೆದ್ದಾರಿ ಸಂ. (1)	36.40
2 ಜೀರಾದ್–ಸದಾಶಿವಡ ರಾಜ್ಯ ಹೆದ್ದಾರಿ ಸಂ. 34	43.80
ಒಟ್ಟು ರಾಜ್ಯ ಹೆದ್ದಾರಿಗಳು	**80.20**
ಜಿಲ್ಲಾ ಮುಖ್ಯ ರಸ್ತೆಗಳು:	
1. ಬಸವಕಲ್ಯಾಣ ರಾಜೋಳಾ ರಸ್ತೆ	12.00
2. ಬಸವಕಲ್ಯಾಣ ಪರತಾಪೂರಾ–ತಾಂಬೋಳಾ ರಸ್ತೆ	7.00
3. ಭೋಸಗಾದಿಂದ ಮುಡಬಿ ರಸ್ತೆ	15.00
4. ಕಂಡಕಾಪೂರ–ಬಾರ್ಡರದಿಂದ ಹತ್ತರಗಾ ರಸ್ತೆ	20.00
5. ಪರತಾಪೂರ–ಜಾಜನಮುಗಳಿ ರಸ್ತೆ	25.00

ರಸ್ತೆಯ ಹೆಸರು	ರಸ್ತೆಯ ಉದ್ದ (ಕಿಮೀಗಳಲ್ಲಿ)
6. ಬಸವಕಲ್ಯಾಣ–ಬಿ.ಎನ್. ರಸ್ತೆ	9.00
7. ರಾಜೋಳು–ರಾಜೇಶ್ವರ ರಸ್ತೆ	7.00
8. ರಾಜೇಶ್ವರ–ಮುಡಬಿ ರಸ್ತೆ	15.00
9. ಮುಡಬಿ–ಹಳ್ಳಿಖೇಡ ರಸ್ತೆ	17.00
10. ಮುಡಬಿ–ವರನಾಳ ರಸ್ತೆ	10.50
11. ಕೊಹಿನೂರ–ಹತ್ತಂಗ ರಸ್ತೆ	13.50
12. ಬೆಟಗೇರಾ–ಬೆಳಂಬಗಿ ರಸ್ತೆ	7.00
ಒಟ್ಟು ಜಿಲ್ಲಾ ಮುಖ್ಯ ರಸ್ತೆ	158.00

ಆ) ಅಂತರರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು ಈ ಕೆಳಗಿನಂತಿವೆ:

1. ರಾಜ್ಯ ಗಡಿಯಿಂದ ಹುಲಸೂರು–ಬಸವಕಲ್ಯಾಣ–ಮುಡಬಿ–ಮುಡಗಾಂವ್ ರಸ್ತೆ (ರಾಜ್ಯ ಹೆದ್ದಾರಿ ಸಂ. 11)
2. ಬಸವಕಲ್ಯಾಣ–ಪರತಾಪೂರ–ತಾಂಬೋಳಾ ರಸ್ತೆ (ಜಿಲ್ಲಾ ಮುಖ್ಯ ರಸ್ತೆ)
3. ಚಂಡಕಾಪೂರ–ಬಾರ್ಡ್‌ರದಿಂದ ಹತ್ತರಗಾ ರಸ್ತೆ (ಜಿಲ್ಲಾ ಮುಖ್ಯ ರಸ್ತೆ)
4. ಪರತಾಪೂರ–ಚಾಜನಮುಗಳಿ ರಸ್ತೆ (ಜಿಲ್ಲಾ ಮುಖ್ಯ ರಸ್ತೆ)
5. ಬಸವಕಲ್ಯಾಣ–ಬಿ.ಎನ್. ರಸ್ತೆ (ಜಿಲ್ಲಾ ಮುಖ್ಯ ರಸ್ತೆ)

ಇ) ಬಸಕಲ್ಯಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಿಗೆ ಕಳೆದ 3 ವರ್ಷಗಳಿಂದ ಮಾಡಲಾದ ವೆಚ್ಚದ ವಿವರ ಈ ಕೆಳಗಿನಂತಿವೆ.

1. 2001–02 ರೂ. 68.63 ಲಕ್ಷಗಳು
2. 2002–03 ರೂ. 56.13 ಲಕ್ಷಗಳು
3. 2003–04 ರೂ. 47.97 ಲಕ್ಷಗಳು

ಒಟ್ಟು ರೂ. 172.73 ಲಕ್ಷಗಳು

ಈ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ವಿಶೇಷವಾಗಿ ನೆರೆಯ ಮಹಾರಾಷ್ಟ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಾಗಿದ್ದು ಸಿಆರ್‌ಎಫ್, ನಬಾರ್ಡ್ ಹಾಗೂ ಹೆಚ್‌ಕೆಡಿಬಿ ಯೋಜನೆಯಡಿಯಲ್ಲಿ ಸುಧಾರಣೆ ಮಾಡಿ ಸುಸ್ಥಿತಿಯಲ್ಲಿಡಲಾಗಿದೆ.

ಉ) ಪ್ರಸಕ್ತ ಸಾಲಿನಲ್ಲಿ ಸೂಕ್ತ ಅನುದಾನವನ್ನು ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಊ) ಈ ಮೇಲಿನ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳು ಇರುವುದಿಲ್ಲ, ಆದರೆ ಮಹಾರಾಷ್ಟ್ರಕ್ಕೆ ಸಂಪರ್ಕ ಕಲ್ಪಿಸುವ 36.00 ಕಿಮೀ ಉದ್ದದ ಗ್ರಾಮೀಣ ರಸ್ತೆಯ ಮಂಠಾಳ ಗುಂಡೂರು ಯಲ್ಲದಗುಂಡಿ ಭೋಸಗಾ ಲಾಡವಂತಿ ರಾಮತೀರ್ಥ (ಡಿ) ದಿಂದ ಗದಲೇಗಾಂವ್‌ವರೆಗಿನ ಈ ಗ್ರಾಮಗಳ ಮೂಲಕ

ಹಾದು ಹೋಗುವ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಗೆ ಮೇಲ್ದರ್ಜೆಗೇರಿಸಲು ಪರಿಶೀಲಿಸಲಾಗುತ್ತಿದೆ.

590(743) : ಶ್ರೀ ನರಸಿಂಹ ನಾಯಕ್ (ಸುರಪುರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುರಪುರ ತಾಲ್ಲೂಕಿನ ಗ್ರಾಮಗಳಲ್ಲಿ ಸುಮಾರು 45ಕ್ಕೂ ಹೆಚ್ಚಿನ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು, ಐ.ಪಿ. ಸೆಟ್‌ಗಳು ಸುಟ್ಟು ಹೋಗಿ ವಿದ್ಯುತ್ ಹಾಗೂ ನೀರಿನ ತೊಂದರೆಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಐ.ಪಿ. ಸೆಟ್ ಅಳವಡಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಸದರಿ ವಿಷಯದ ಬಗ್ಗೆ ಈಗಾಗಲೇ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಂಡಿದ್ದರೂ ಸಹ ಗುಲ್ಬರ್ಗಾ ಜೆಸ್ಕಾಂ ಅಧಿಕಾರಿಗಳು 10 ತಿಂಗಳಿನಿಂದ ನಿರ್ಲಕ್ಷ್ಯ ತೋರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಎಷ್ಟು ದಿನಗಳಲ್ಲಿ 45 ಹಳ್ಳಿಗಳಿಗೆ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಐ.ಪಿ. ಸೆಟ್ ಅಳವಡಿಸುವ ಕಾರ್ಯ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು ಗಮನಕ್ಕೆ ಬಂದಿದೆ.

ಆ) 25 ಕೆವಿಯ 11 ಪರಿವರ್ತಕಗಳಲ್ಲಿ 9 ಪರಿವರ್ತಕಗಳನ್ನು ಬದಲಾಯಿಸಲಾಗಿದ್ದು ಉಳಿದ 2ನ್ನು ಬದಲಾಯಿಸಬೇಕಾಗಿದೆ. 63 ಕೆ.ವಿ.ಯ 34 ಪರಿವರ್ತಕಗಳಲ್ಲಿ 12 ಪರಿವರ್ತಕಗಳನ್ನು ಬದಲಾಯಿಸಲಾಗಿದ್ದು ಉಳಿದ 22ನ್ನು ಬದಲಾಯಿಸಬೇಕಾಗಿದೆ. 100 ಕೆ.ವಿ.ಯ 18 ಪರಿವರ್ತಕಗಳಲ್ಲಿ 12 ಪರಿವರ್ತಕಗಳನ್ನು ಬದಲಾಯಿಸಲಾಗಿದ್ದು ಉಳಿದ 6ನ್ನು ಬದಲಾಯಿಸಬೇಕಾಗಿದೆ ಮತ್ತು 250 ಕೆ.ವಿ.ಎ. 3 ಪರಿವರ್ತಕಗಳನ್ನು ಬದಲಾಯಿಸಬೇಕಾಗಿದೆ.

ವಿಫಲವಾದ ಪರಿವರ್ತಕಗಳ ಕೊರತೆಯನ್ನು ನೀಗಿಸಲು ಬೇರೆ ವಿದ್ಯುತ್ ಸರಬರಾಜು ಕಂಪೆನಿಗಳಿಂದ ಎಣ್ಣೆ ಮತ್ತು ಪರಿವರ್ತಕಗಳನ್ನು ತರಿಸಲು ವ್ಯವಸ್ಥೆ ಮಾಡಲಾಗಿದೆ. ಎಣ್ಣೆ ಮತ್ತು ಪರಿವರ್ತಕಗಳು ಬಂದ ಕೂಡಲೇ ಪರಿವರ್ತಕಗಳನ್ನು ಬದಲಾಯಿಸಲು ಕ್ರಮ ಜರುಗಿಸಲಾಗುವುದು.

ಇ) ಕಳೆದ ಕೆಲವು ತಿಂಗಳುಗಳಲ್ಲಿ ಎಣ್ಣೆ ಹಾಗೂ ಮತ್ತಿತರ ಸಾಮಗ್ರಿಗಳ ಕೊರತೆಯಿಂದಾಗಿ ಮತ್ತು ನಿಸರ್ಗದ ಪ್ರಕೋಪದಿಂದಾಗಿ (ಹೆಚ್ಚು ಗಾಳಿ ಬೀಸಿ) ಪರಿವರ್ತಕಗಳು ಹೆಚ್ಚು ವಿಫಲವಾಗಿದ್ದು, ನಿರೀಕ್ಷಿತ ಮಟ್ಟದಲ್ಲಿ ದುರಸ್ತಿ ಮಾಡಲು ಹಾಗೂ ಬದಲಾಯಿಸಲು ಸಾಧ್ಯವಾಗಿಲ್ಲ. ಆದಷ್ಟು ಬೇಗನೆ ಪರಿವರ್ತಕಗಳನ್ನು ಬದಲಾಯಿಸುವ ಕ್ರಮ ಜರುಗಿಸಲಾಗುವುದು.

ಈ) ಆದಷ್ಟು ಬೇಗನೆ ಆದ್ಯತೆಯ ಮೇರೆಗೆ ಸುಟ್ಟು ಹೋದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಐ.ಪಿ. ಸೆಟ್ ಟ್ರಾನ್ಸ್‌ಫಾರ್ಮರ್ ಬದಲಾಯಿಸಲಾಗುವುದು.